ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಉತ್ಪಾದನೆಯಾದ ರೇಷ್ಮೆಯ ಜಿಲ್ಲಾವಾರು ವಿವರ
(ಉತ್ಪಾದನೆ : ಮೆಟ್ರಿಕ್ ಟನ್‌ಗಳಲ್ಲಿ)

ಕ್ರ.ಸಂ.	ಜಿಲ್ಲೆ	1988-89	1989-90	1990-91	1991-92(ಫೆಬ್ರುವರಿ 92ರ ಅಂತ್ಯದವರೆಗೆ)
1	ಬೆಂಗಳೂರು ನಗರ ಜಿಲ್ಲೆ	67	135	151	108
2	ಬೆಂಗಳೂರು ಗ್ರಾಮಾಂತರ	1168	1252	1251	1079
3	ಬೆಳಗಾಂ	13	28	29	23
4	ಬಳ್ಳಾರಿ	25	28	29	25
5	ಬೀದರ್	3	6	6	5
6	ವಿಜಾಪುರ	19	33	35	20
7	ಚಿಕ್ಕಮಗಳೂರು	8	12	20	18
8	ಚಿತ್ರದುರ್ಗ	81	96	127	114
9	ದಕ್ಷಿಣ ಕನ್ನಡ	11	15	17	15
10	ಧಾರವಾಡ	25	29	32	24
11	ಗುಲ್ಬರ್ಗಾ	18	36	37	23
12	ಹಾಸನ	45	71	93	101
13	ಕೊಡಗು	6	8	9	7
14	ಕೋಲಾರ	1344	1564	1542	1394
15	ಮಂಡ್ಯ	769	830	830	540
16	ಮೈಸೂರು	1375	1478	1485	1100
17	ರಾಯಚೂರು	7	13	18	13
18	ಶಿವಮೊಗ್ಗ	14	14	14	11
19	ತುಮಕೂರು	306	419	430	366
20	ಉತ್ತರ ಕನ್ನಡ	8	9	9	7
	ಒಟ್ಟು	5317	6076	6214	4993

ವಿಷಯ:ಚಾಮರಾಜನಗರ ತಾಲ್ಲೂಕು ಜೋತಿಗೊಂಡನಪುರದಲ್ಲಿ ಕರಿಕಲ್ಲು ಕ್ವಾರಿಯ ಕೆಲಸ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1389 (2243)

ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಚಾಮರಾಜನಗರ ತಾಲ್ಲೂಕು ಜೋತಿಗೊಂಡನಪುರದ ಸರ್ವೆ ನಂ. 184 ಮತ್ತು 248ರಲ್ಲಿ ಕರಿಕಲ್ಲು ಕ್ವಾರಿಯ ಕೆಲಸ ನಡೆಯುತ್ತಿದೆಯೇ ?

2. ಹಾಗಿದ್ದಲ್ಲಿ ಅಲ್ಲಿ ಕ್ವಾರಿಯ ಕೆಲಸ ಮಾಡುತ್ತಿರುವವರು ಯಾರು ?

3. ಕ್ವಾರಿಯ ಕೆಲಸ ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು(ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ) ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಹೌದು.

2. ಲಭ್ಯವಿರುವ ಮಾಹಿತಿ ಪ್ರಕಾರ ಶ್ರೀಯುತರಾದ ಬಿಯಾ-ಉಲ್-ಹಕ್-ಮಂಚೇಗೌಡ ಮತ್ತು ಮೆ :ಗ್ರಾನೈಟ್ ಇಂಡಿಯಾ ಪ್ರೈ. ಲಿ. ಇವರು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕೆಲಸ ನಿರ್ವಹಿಸುತ್ತಿದ್ದಾರೆ.

3. ಮಂಜೂರಾದ ಗುತ್ತಿಗೆ ಪ್ರದೇಶದಲ್ಲಿ ಕೆಲಸ ನಿರ್ವಹಿಸದಿರುವಂತೆ ಈಗಾಗಲೇ ಸೂಚನೆ ನೀಡಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನೆ ಪರ್ಮಿಟ್‌ನ್ನು ನೀಡದಿರುವಂತೆ ಮಾಡುವ ಗ್ರಾನೈಟ್‌ನ್ನು ತಡೆದು ಕಾನೂನಿನನ್ವಯ ಕ್ರಮವನ್ನು ಮಂಗಳೂರಿನ ಬಳಿ 5 ಚೆಕ್ ಪೋಸ್ಟ್‌ಗಳನ್ನು ತೆರೆಯುವ ಮೂಲಕ ತೆಗೆದುಕೊಂಡು, ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

ಉಪಾಧ್ಯಕ್ಷಿಣಿಯವರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ನಿಯಮ 334ರ ಮೇರೆಗೆ

ವಿಷಯ: (1)ಪಾಲಿಟೆಕ್ನಿಕ್‌ನಲ್ಲಿ ಅಧ್ಯಾಪಕರಿಗೆ ಬಡ್ತಿ.

ಶ್ರೀ ಪಿ. ಬಸವರಾಜ್ :- ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮ-ಇನ್-ಕಮರ್ಶಿಯಲ್ ಪ್ರಾಕ್ಟೀಸ್ ಎಂಬ ಒಂದು ಕೋರ್ಸ್ ಇದ್ದು ಇದರಲ್ಲಿ ಕನ್ನಡ ಮತ್ತು ಇಂಗ್ಲೀಷ್ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳು ಒಳಗೊಂಡಿವೆ. ಈ ವಿಷಯಗಳಿಗೆ ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳುವಾಗ ಅವರಿಗೆ ಅರ್ಹತೆಯಾಗಿ : ಎಸ್ ಎಸ್ ಎಲ್ ಸಿ ಹಾಗೂ ಟೈಪ್‌ರೈಟಿಂಗ್ ಮತ್ತು ಶೀಘ್ರಲಿಪಿ ಸೀನಿಯರ್ ಗ್ರೇಡ್ ಅಥವಾ ಡಿಪ್ಲೋಮ ಇನ್ ಕಮರ್ಶಿಯಲ್ ಪ್ರಾಕ್ಟೀಸ್‌ನಲ್ಲಿ ತೇರ್ಗಡೆಯಾಗಿರಬೇಕೆಂದು ನಿಗದಿಪಡಿಸಿ ನೇಮಕ ಮಾಡಿಕೊಂಡಿದ್ದರು. ಹೀಗೆ ಕೆಲಸ ಮಾಡುತ್ತಿರುವ ಸಹ ಉಪನ್ಯಾಸಕರುಗಳಿಗೆ ಕೊಟ್ಟುಮೇಲೆ ಅವರನ್ನು ಅದೇ ಕೋರ್ಸ್‌ನ ಇತರ ವಿಷಯಗಳಿಗೆ ಭೋದಿಸಲು ನಿಯುಕ್ತಿ ಮಾಡಲಾಗುತ್ತಿದೆ. ಹೀಗೆ ಮಾಡುವುದರಿಂದ ಅರ್ಹತೆ ಇಲ್ಲದ ಸಹ ಉಪನ್ಯಾಸಕರುಗಳು ಮತ್ತು ವಿದ್ಯಾರ್ಥಿಗಳು ಇಬ್ಬರೂ ತೊಂದರೆಗೆ ಒಳಪಡಬೇಕಾಗುತ್ತದೆ. ಆದುದರಿಂದ ದಯಮಾಡಿ ಯಾವ ಅರ್ಹತೆಯ ಮೇಲೆ ನೇಮಕ ಹೊಂದಿರುತ್ತಾರೋ ಅವರಿಗೆ ಅರ್ಹತೆ ಇಲ್ಲವಾದಲ್ಲಿ ಅಂಥ ಇತರ ವಿಷಯಗಳನ್ನು ಭೋದಿಸಲು ನಿಯುಕ್ತಿ ಮಾಡಬಾರದು ಮತ್ತು ಅವರಿಗೆ ಬಡ್ತಿ ಕೊಟ್ಟಾದ ಮೇಲೆಯೂ ಲೆಕ್ಚರರ್ ಇನ್ ಶಾರ್ಟ್‌ಹ್ಯಾಂಡ್ ಅಂಡ್ ಟೈಪರೈಟಿಂಗ್ ಎಂಬ ಹುದ್ದೆಯಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 3-9-87ಕ್ಕೆ ಮುಂಚೆ ಜಾರಿಯಲ್ಲಿದ್ದ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕ ಹುದ್ದೆಯನ್ನು ಸಹಾಯಕ ಉಪನ್ಯಾಸಕರಿಂದ ಬಡ್ತಿ ಮೇರೆಗೆ ತುಂಬಲು ಕಾಮರ್ಸ್‌ನಲ್ಲಿ ಡಿಗ್ರಿ ಮತ್ತು ಸಹಾಯಕ ಉಪನ್ಯಾಸಕರ ಹುದ್ದೆಯಲ್ಲಿ 2 ವರ್ಷಗಳ ಸೇವಾ ಅನುಭವ ನಿಗದಿಪಡಿಸಲಾಗಿತ್ತು. ಇದರಿಂದ ಕಾಮರ್ಸ್ ಡಿಗ್ರಿ ವಿದ್ಯಾರ್ಹತೆ ಹೊಂದಿರದೇ ಇದ್ದ ಸಹಾಯಕ ಉಪನ್ಯಾಸಕರಿಗೆ ಬಡ್ತಿ ಅವಕಾಶ ದೊರೆಯದೇ ಅವರುಗಳು ಸಹಾಯಕ ಉಪನ್ಯಾಸಕ ವರ್ಗದಲ್ಲೇ ಕೊನೆಯವರೆಗೂ ಉಳಿಯುವ ಸಂಭವವಿತ್ತು.

ಆದರೆ ದಿನಾಂಕ 3-9-87 ರಿಂದ ಜಾರಿಯಾದ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಉಪನ್ಯಾಸಕರ ಹುದ್ದೆಯನ್ನು ಸಹಾಯಕ ಉಪನ್ಯಾಸಕರಿಂದ ಬಡ್ತಿ ಮೇರೆಗೆ